# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 989
ಸದಸ್ಯರ ಹೆಸರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 11.03.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆಯ ವ್ಯಾಪ್ತಿಯ ರಸ್ತೆ ಮಾರ್ಜಿನಿನಲ್ಲಿ ಕಟ್ಟಿರುವಂತಹ ಕಟ್ಟಡಗಳ ಪ್ರಕರಣಗಳ ಸಂಖ್ಯೆ ಎಷ್ಟು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಚನ್ನರಾಯಪಟ್ಟಣ ತಾಲ್ಲೂಕು, ಬಳದರೆ ಗ್ರಾಮದ ಸ.ನಂ. 260ರ ಜಮೀನಿನಲ್ಲಿ ರಸ್ತೆ ಮಾರ್ಜಿನ್‌ನಲ್ಲಿ ಕಟ್ಟಡ ನಿರ್ಮಿಸಿರುವುದಾಗಿ ದೂರು ಸ್ವೀಕೃತವಾಗಿದ್ದು, ಇದನ್ನು ಹೊರತುಪಡಿಸಿ ಇಂತಹ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| (ಆ) | ಇದರ ಪರಿವರ್ತನೆ ಸಂಬಂಧ ಜಿಲ್ಲಾಧಿಕಾರಿಯವರು ರಸ್ತೆ ಮಾರ್ಜಿನಿನಲ್ಲಿ ಕಟ್ಟಿರುವಂತಹ ಕಟ್ಟಡಗಳಿಗೆ ಅನ್ಯ ಸಂಕ್ರಮಣ/ ಭೂ ಆದೇಶ ಕೊಟ್ಟಿದ್ದಾರೆಯೇ; (ಮಾಹಿತಿ ನೀಡುವುದು) | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಹಾಸನ ರವರ ವರದಿಯಂತೆ;<br><br>1. ಭೂ ಪರಿವರ್ತನೆ ಕೋರಿ ಸ್ವೀಕೃತವಾದ ಪ್ರಸ್ತಾಪಿತ ಜಮೀನಿನಲ್ಲಿ ಹಾಲಿ ಕಟ್ಟಡಗಳು ಇದ್ದಲ್ಲಿ ಕಟ್ಟಡಗಳಿಗೆ ಕಂದಾಯ ಇಲಾಖೆಯು ಕಾನೂನಿನಂತೆ ಕ್ರಮ ಕೈಗೊಂಡು ಭೂ ಅನ್ಯಕ್ರಾಂತ ಮಂಜೂರಾತಿ ನೀಡಬಹುದಾಗಿದ್ದು, ಕಂದಾಯ ಇಲಾಖೆಯು ಇಂತಹ ಪ್ರಕರಣಗಳಲ್ಲಿ ದಂಡ ವಿಧಿಸಿ ಭೂ ಅನ್ಯಕ್ರಾಂತ ನಿರ್ಮಾಣವನ್ನು ಮಂಜೂರಾತಿ ನೀಡಿದ್ದಲ್ಲಿ ಕಟ್ಟಡ ಸಕ್ರಮಗೊಳಿಸದಂತಾಗುತ್ತದೆ ಹಾಗೂ ರಸ್ತೆ ಅಭಿವೃದ್ಧಿಪಡಿಸಬೇಕಾದ ಸಂದರ್ಭದಲ್ಲಿ ರಸ್ತೆ ಮಾರ್ಜಿನ್‌ನಲ್ಲಿ ಬಂದಿರುವ ಕಟ್ಟಡಗಳನ್ನು ತೆರವುಗೊಳಿಸಲು ಕಾನೂನಿನ ತೊಡಕು ಉಂಟಾಗುವ ಸಂಭವ ಇರುತ್ತದೆ. ಆದ್ದರಿಂದ ಇಂತಹ ಪ್ರಕರಣಗಳಲ್ಲಿ ರಸ್ತೆ ಮಾರ್ಜಿನ್ ಕಟ್ಟಡ ರೇಖೆ ವ್ಯಾಪ್ತಿಯಲ್ಲಿ ಬರುವ ಹಾಲಿ ಕಟ್ಟಡದ ಭಾಗವನ್ನು ರಸ್ತೆ ಅಗಲೀಕರಣ ಕೈಗೊಂಡಾಗ ತೆರವುಗೊಳಿಸುವ ಬಗ್ಗೆ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರ ಪಡೆದ ನಂತರ ಕಂದಾಯ ಇಲಾಖೆಯು ಭೂ ಪರಿವರ್ತನೆಯ ಸಂಬಂಧ ಕಾರ್ಯ್ಯವನ್ನು ಕ್ರಮ ಜರುಗಿಸಬಹುದೆಂದು ನಿಬಂಧನೆ ವಿಧಿಸಿ ತಾಂತ್ರಿಕ ಅಭಿಪ್ರಾಯ ನೀಡಲು ಇಲಾಖೆಯು ಸೂಚಿಸಲಾಗಿರುತ್ತದೆ. ಸದರಿ ನಿರ್ದೇಶನದಂತೆ ಕೃಷಿ ಜಮೀನಿನಲ್ಲಿ ರಸ್ತೆ ಮಾರ್ಜಿನ್/ ಕಟ್ಟಡ ರೇಖೆ ಪ್ರದೇಶದಲ್ಲಿ ಕಟ್ಟಡವನ್ನು ನಿರ್ಮಿಸಿಕೊಂಡು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಲಾದ ಪ್ರಕರಣಗಳಲ್ಲಿ ಭೂ ಮಾಲೀಕರಿಂದ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಮುಚ್ಚಳಿಕೆ ಪತ್ರ ಪಡೆದುಕೊಂಡು ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯವನ್ನು ಈ ಹಿಂದೆ ನೀಡಲಾಗಿರುತ್ತದೆ. |

| | | |
|---|---|---|
| | | 2. ಪ್ರಸ್ತುತ ಸರ್ಕಾರದ ಅಧಿಸೂಚನೆ ಸಂಖ್ಯೆ.UDD 16 TTP 2023 (E), ದಿನಾಂಕ: 07-05-2025ರಂತೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ನಿಯಮಗಳನ್ನು ರಚಿಸಿ ಆದೇಶಿಸಲಾಗಿದ್ದು, ಸದರಿ ನಿಯಮಾವಳಿಗಳಂತೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು/ಭೂ ಪರಿವರ್ತನೆಗೆ ಅಭಿಪ್ರಾಯ ನೀಡಲು ಕ್ರಮವಹಿಸಲಾಗುತ್ತಿದ್ದು, ಈ ನಿಯಮಾವಳಿಗಳು ಜಾರಿಗೆ ಬಂದ ತರುವಾಯ ಅಂತಹ ಪ್ರಕರಣಗಳ ಭೂಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಿರುವುದಿಲ್ಲ.<br><br>ಅದರಂತೆ ಈ ಹಿಂದೆ ಸಂಬಂಧಪಟ್ಟ ವಿವಿಧ ಇಲಾಖೆಗಳ ಶಿಫಾರಸ್ಸಿನ ಮೇರೆ ಭೂಪರಿವರ್ತನೆ ಸಂದರ್ಭದಲ್ಲಿ ಹಿಡುವಳಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ, 1964ರ ಕಲಂ 95 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 107 ರಡಿ ದಂಡ ವಿಧಿಸಿ ಭೂಪರಿವರ್ತನೆ ನೀಡಲಾಗಿರುತ್ತದೆ. |
| (ಇ) | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋ. ರಸ್ತೆ ಮಾರ್ಜಿನಿನಲ್ಲಿ ಬರುವ ಬಳದರೆ ಗ್ರಾಮದ ಜಿಲ್ಲೆ ಸರ್ವೇ ನಂಬರ್ 260 ರ 2.20 ಎಕರೆ ಹಿಡುವಳಿ ಜಮೀನಿನಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ಕಟ್ಟಿರುವ ಜಾಗಕ್ಕೆ ದಿ: 07.10.2023 ರಂದು ಕಾನೂನು ಉಲ್ಲಂಘಿಸಿ ಭೂಪರಿವರ್ತನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾನೂನು ಉಲ್ಲಂಘಿಸಿ ಮಾಡಿರುವ ಆದೇಶದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಅನಧಿಕೃತ ಕಟ್ಟಡ ತೆರವುಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | 2019 ನೇ ಸಾಲಿನಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95 ಕ್ಕೆ ತಿದ್ದುಪಡಿ ತರಲಾಗಿದ್ದು, ಅಫಿಡವಿಟ್ ಆಧಾರಿತ ಆನ್‌ಲೈನ್ ತಂತ್ರಾಂಶದ ಮೂಲಕ ಭೂಪರಿವರ್ತನೆಯನ್ನು ನಿರ್ವಹಿಸಲಾಗುತ್ತಿದ್ದು, ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನ ಹೋಬಳಿ, ಬಳದರೆ ಗ್ರಾಮದ ಸ.ನಂ 260 ಕ್ಕೆ ಸಂಬಂಧಿಸಿದಂತೆ ಖಾತೆದಾರರು ಅಫಿಡವಿಟ್ ಸಂಖ್ಯೆ. 583119 ರ ರೀತ್ಯಾ ಭೂಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಮೇರೆ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರ್, ಚನ್ನರಾಯಪಟ್ಟಣ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ರವರಿಂದ ವರದಿ ಪಡೆದಿದ್ದು, ಸದರಿಯವರ ಶಿಫಾರಸ್ಸಿನ ಮೇರೆ ಹಾಗೂ ತಹಸೀಲ್ದಾರ್, ಚನ್ನರಾಯಪಟ್ಟಣ ರವರು ತಮ್ಮ ವರದಿಯಲ್ಲಿ ಪ್ರಸ್ತಾಪಿತ ಪ್ರದೇಶದಲ್ಲಿ ಈಗಾಗಲೇ 47*53 ವಿಸ್ತೀರ್ಣದ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ವರದಿ ಮಾಡಿದ್ದು, ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 107 ರಂತೆ ಕೃಷಿಯೇತರ ಉದ್ದೇಶಕ್ಕೆ ಬಳಸಿದ್ದಕ್ಕೆ ಅನ್ವಯವಾಗುವ ಭೂ ಪರಿವರ್ತನಾ ಶುಲ್ಕ ರೂ.54,450/-, ಪೋಡಿ ಶುಲ್ಕ ರೂ.55/- ಮತ್ತು ದಂಡ ಶುಲ್ಕ ರೂ. 3,990/- ಸೇರಿದಂತೆ ಒಟ್ಟು ರೂ.58495/-ನ್ನು ವಿಧಿಸಿ ಭೂ ಪರಿವರ್ತನೆಯನ್ನು ನೀಡಲಾಗಿರುತ್ತದೆ. ನಿಯಮಾವಳಿಗಳಂತೆ ದಂಡ ವಿಧಿಸಿ ಭೂ ಪರಿವರ್ತನೆ ಅನುಮತಿ ಆದೇಶ ನೀಡಿರುವುದರಿಂದ ತೆರವುಗೊಳಿಸುವ ಪ್ರಮೇಯ ಇರುವುದಿಲ್ಲ. |

(ಕಡತ ಸಂಖ್ಯೆ: ಆರ್‌ಡಿ 24 ಎಲ್‌ಜಿಹೆಚ್ 2026)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು